**<u>ಸಾಕ್ಷಿಯನ್ನು ದಿನಾಂಕ 01-08-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್. ಜಿ. ಚಂದಾವರ ವಕೀಲರಿಂದಃ,</u>**

ಆರೋಪಿಗೆ ದಿನಾಂಕ 30-03-2019 ರಂದು ಸಾಲ ನೀಡಲಾಗಿತ್ತು. ಆರೋಪಿ ಸಾಲಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಹಾಜರುಪಡಿಸಿಲ್ಲ, ಬೇಕೆಂದರೆ ಹಾಜರುಪಡಿಸುತ್ತೇನೆ. ಸದರಿ ಸಾಲವನ್ನು ಹೊನ್ನಾವರ ತಾಲೂಕಿನ ಕಲ್ಲೆ ಗ್ರಾಮದ ಸ.ನಂ.471ಬ/5 ರ ಸ್ವತ್ತಿನ ಮೇಲೆ ಮಾಡಿದ್ದ ಅಡಮಾನ ಸಾಲವಾಗಿರುತ್ತದೆ. ಸದರಿ ಸ್ವತ್ತು ಆರೋಪಿಯ ಹೆಸರಿನಲ್ಲಿರುತ್ತದೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ಅಡಮಾನ ಪತ್ರವನ್ನೂ ಸಹ ಮಾಡಲಾಗಿರುತ್ತದೆ. ಅಡಮಾನ ಪತ್ರವನ್ನು ಮತ್ತು ಪಹಣಿಯನ್ನು ಹಾಜರುಪಡಿಸಿಲ್ಲ. ಆರೋಪಿಯು ಪ್ರತಿ ತಿಂಗಳಿಗೆ ರೂ.30,000-00 ದಂತೆ 10 ವರ್ಷಗಳ ಕಾಲ ಸಾಲ ಮರುಪಾವತಿ ಮಾಡಬೇಕಾಗಿತ್ತು. ಆರೋಪಿಗೆ ರೂ.15,00,000-00 ಸಾಲ ಮಂಜೂರು ಮಾಡಲಾಗಿದೆ. ಮಂಜೂರಾದ ಸಾಲದಲ್ಲಿ ಯಾವುದೇ ಎಫ್.ಡಿ. ತೆಗೆದುಕೊಂಡಿಲ್ಲ. ಸದರಿ ಸಾಲವನ್ನು

ಪಿಡಬ್ಲು-1

ಆರೋಪಿಯ ಉಳಿತಾಯ ಖಾತೆಗೆ ಜಮಾ ಮಾಡಿದ್ದು ಆಕೆ ಅದನ್ನು ಹಿಂಪಡೆದುಕೊಂಡಿರುತ್ತಾರೆ. ಸಾಲ ಪಡೆದಾಗಿನಿಂದ ಒಂದು ಕಂತನ್ನೂ ಸಹ ಆರೋಪಿ ಕಟ್ಟಲಿಲ್ಲ. ಮಾರ್ಚ-2020ರಲ್ಲಿ ಆಕೆಯ ಪಿಗ್ಮಿ ಖಾತೆಯಿಂದ ರೂ.49,250-00 ಹಾಗೂ ಡಿಸೆಂಬರ್ 2021ರಲ್ಲಿ ರೂ.2,00,000-00 ವನ್ನು ಮತ್ತು ಫೆಬ್ರುವರಿ-2025ರಲ್ಲಿ ಪಿಗ್ಮಿಯ ಮೂಲಕ ರೂ.12,000-00 ಪಾವತಿ ಮಾಡಿರುತ್ತಾರೆ.

ದಿನಾಂಕ 18-01-2021ಕ್ಕೆ ಆರೋಪಿಯು ರೂ.18,39,089-00 ಬಾಕಿ ಇತ್ತು ಎಂದು ತೋರಿಸಲು ಆಕೆಯ ಸಾಲದ ಎಕ್ಸಟ್ರಾಕ್ಟನ್ನು ಹಾಜರುಪಡಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ. ಆರೋಪಿಯ ವಿರುದ್ಧ ಇದಲ್ಲದೇ ಇನ್ನೂ ಎರಡು ಚೆಕ್ ಪ್ರಕರಣಗಳನ್ನು ದಾಖಲಿಸಿದ್ದು ಅವುಗಳಲ್ಲಿ ಆಕೆ ಹಣ ತುಂಬಿ ಪ್ರಕರಣಗಳನ್ನು ಮುಗಿಸಿಕೊಂಡಿರುತ್ತಾರೆ. ಸದರಿ ಎರಡೂ ಪ್ರಕರಣದ ಚೆಕ್ಕುಗಳನ್ನು ಈ ಪ್ರಕರಣದ ಚೆಕ್ಕನ್ನು ಆರೋಪಿ ಒಂದೇ ದಿನವೇ ನೀಡಿರುತ್ತಾರೆ. ಆರೋಪಿಯೇ ಸ್ವತಃ ಬ್ಯಾಂಕಿಗೆ ಬಂದು ಸದರಿ ಚೆಕ್‌ಗಳನ್ನು ನೀಡಿರುತ್ತಾರೆ. ಆರೋಪಿಯಿಂದ 3 ಚೆಕ್ಕುಗಳನ್ನು ಸಾಲ ಮಂಜೂರಿ ಮಾಡುವ ಪೂರ್ವದಲ್ಲಿ ಭದ್ರತೆಗಾಗಿ ತೆಗೆದುಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ನಮಗೆ ತೋಚಿದಂತೆ ಚೆಕ್‌ನ್ನು ಬರೆದು ಹಾಜರುಪಡಿಸಿದ್ದೇವೆ, ಆರೋಪಿ ಚೆಕ್‌ನ್ನು ಯಾವತ್ತೂ ನಮೂದಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕ 18-01-2021ಕ್ಕೆ ಆರೋಪಿಯು ರೂ.18,39,089-00 ಬಾಕಿ ಇತ್ತು ಎಂದು ಸುಳ್ಳು ಹೇಳುತ್ತಿದ್ದು, ಆಕೆ ಅಷ್ಟು ಹಣ ಕೊಡುವದು ಬಾಕಿ ಇರಲಿಲ್ಲ ಎಂದರೆ ಸರಿಯಲ್ಲ. ಚೆಕ್‌ನ್ನು ಅವರೇ ಬರೆದುಕೊಂಡು ಬಂದು ಹಾಜರುಪಡಿಸಿರುತ್ತಾರೆ. ಆರೋಪಿ ಚೆಕ್‌ನ್ನು ಬರೆದುಕೊಟ್ಟಿಲ್ಲ ನಾವೇ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಡಮಾನ ಸಾಲಕ್ಕೆ ಮಾರ್ಟಿನ್ ರೆಮಂಡ್ ಮಿರಾಂಡಾ ಮತ್ತು ಪರಮೇಶ್ವರ ಮಾದೇವ ನಾಯ್ಕರವರು ಜಾಮೀನುದಾರರಾಗಿರುತ್ತಾರೆ. ಸದರಿ ಜಾಮೀನುದಾರರ ವಿರುದ್ಧ ಇನ್ನೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಮಾರ್ಟಿನ್ ಮಿರಾಂಡಾ ಆರೋಪಿಯ ಗಂಡ ಎಂದರೆ ಸರಿ. ಆರೋಪಿ ಖಾಯಂ ಆಗಿ ಮಾವಿನಕುರ್ವಾದಲ್ಲಿ ವಾಸವಾಗಿರುವ ವಿಚಾರ ಗೊತ್ತಿದ್ದರೂ ಕೆಳಗಿನ ಇಡಗುಂಜಿ ವಿಳಾಸಕ್ಕೆ ನೋಟೀಸು ಕಳುಹಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಕಳುಹಿಸಿದ ನೋಟೀಸಿನ ಮಾಹಿತಿ ಆರೋಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬ್ಯಾಂಕಿಗೆ ಬಂದು ಯಾವತ್ತೂ ಚೆಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಲದ ಖಾತೆ ಎಕ್ಸಟ್ರಾಕ್ಟ ಹಾಜರುಪಡಿಸಿದರೆ ಸತ್ಯ ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಪ್ರ.ದ.ನ್ಯಾದಂ.**
**ಹೊನ್ನಾವರ.**